			ಲಕ್ಷ ರೂ.ಗಳಲ್ಲಿ
1)	ಆಡಳಿತ ಮತ್ತು ಸುಧಾರಣೆ	:	63.12
2)	ಡ್ಯಾಂ ಮತ್ತು ಸಂಬಂಧಿಸಿದ ಕೆಲಸಗಳು	:	4.85
3)	ಕಾಲುವೆಗಳು ಮತ್ತು ಉಪಕಾಲುವೆಗಳು	:	70.30
4)	ಕಟ್ಟಡಗಳು	:	21.79
5)	ಮೆಷನರಿ ಮತ್ತು ಯಂತ್ರಗಳು	:	4.01
6)	ಅಮಾನತ್ತು ರೂ.(-)	:	71.66
	ಒಟ್ಟು	:	92.41

ಕೃಷ್ಣಾ ಜಲಾನಯನ ಹಾಗೂ ಕಾವೇರಿ ಜಲಾನಯನ ಪ್ರದೇಶಗಳು

2220 - ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) :ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ 20 ವರ್ಷಗಳಿಂದ ಕರ್ನಾಟಕದ ಭಾಗದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ತಮಿಳುನಾಡಿಗೆ ಹರಿಯಬಿಟ್ಟ ನೀರಿನ ಪ್ರಮಾಣವೆಷ್ಟು (ಸಂಪೂರ್ಣ ವಿವರ ಒದಿಗುಸುವುದು)

ಆ) ಅಗತ್ಯಕ್ಕಿಂತ ಹೆಚ್ಚು ನೀರು ತಮಿಳುನಾಡಿಗೆ ಹಾಗಿದ್ದರೆ ಅದನ್ನು ಸಂಗ್ರಹಿಸುವ ಮತ್ತು ಆ ನೀರನ್ನು ನಮ್ಮ ರಾಜ್ಯದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಹರಿಸುವ ಬಗ್ಗೆ ಸರ್ಕಾರದ ಮುಂದೆ ಯೋಜನೆಯೇನಾದರೂ ಇದೆಯೇ.

ಇ) ಹಾಗಿಲ್ಲದಿದ್ದರೆ, ಕುಡಿಯುವ ನೀರಿಗೂ ತೊಂದರೆ ಇದ್ದು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವ ಕಳ್ಳಂಬೆಳ್ಳ ಮತ್ತು ಬೋರನ ಕಣಿವೆ ಜಲಾಶಯ ಮತ್ತು ಮಾರಿಕಣಿವೆ ಜಲಾಶಯಗಳಿಗೆ ನೀರು ಒದಗಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ಡಿ ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ತಮಿಳುನಾಡಿ ಗಡಿಭಾಗದ ಬಿಳಿಗುರಿಡ್ಲುವಿನ ಸಮೀಪ ಕೇಂದ್ರ ಜಲ ಆಯೋಗವು ಮಾಡುತ್ತಿರುವ ಗೇಜಿಂಗ್ ಆಧಾರದ ಮೇಲೆ ಕಳೆದ 20 ವರ್ಷಗಳಲ್ಲಿ ತಮಿಳುನಾಡಿಗೆ ಹರಿದಿರುವ ನೀರಿನ ಪ್ರಮಾಣ ಈ ಕೆಳಕಂಡಂತಿದೆ.

ಟಿ.ಎಂ.ಸಿ ಗಳಲ್ಲಿ

1975-76	455	1985-86	175
1976-77	128	1986-87	194
1977-78	314	1987-88	107
1978-79	399	1988-89	191
1979-80	331	1989-90	186
1980-81	442	1990-91	157
1981-82	417	1991-92	340
1982-83	214	1992-93	358
1983-84	254	1993-94	230
1984-85	320	1994-95	396

ಆ) ಕಾವೇರಿ ಜಲ ವಿವಾದವು ನ್ಯಾಯಾಧೀಕರಣದ ಮುಂದೆ ಇದ್ದು ನೀರಿನ ಅಗತ್ಯತೆ ಹಾಗೂ ಹಂಚಿಕೆಯ ಬಗ್ಗೆ ಅಂತಿಮ ತೀರ್ಪು ಆಗಬೇಕಾಗಿರುವುದರಿಂದ ಸದ್ಯದಲ್ಲೇ ಯಾವುದೇ ಪ್ರಸ್ತಾವ ಇಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಪುನಃ ನಾಳೆ 11 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 7ಗಂಟೆ 8 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 20.9.95 ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)